OS No. 8/2018 PW-**1**

**ದಿನಾಂಕ 31.05.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಬಿ. ಜಿ ಕೀಲರಿಂದ ಃ**

ಸದರಿ ಕರಾರು ಪತ್ರ ಆಗಿದೆ ಎನ್ನುವ ದಿನಾಂಕಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಕರೆಗೆ 22 ಲಕ್ಷ ಇತ್ತು ಎಂದರೆ ಸರಿ. ಸದರಿ ಕರಾರು ಪತ್ರದ ಪ್ರಕಾರ ಜಮೀನು 3 ಎಕರೆ 9 ಗುಂಟೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರದ ಆದ ದಿನಕ್ಕೆ ದಾವಾ ಸ್ವತ್ತಿನ ಬೆಲೆ 70 ಲಕ್ಷ ರೂಪಾಯಿಗಳಷ್ಟು ಆದರೂ ನಾವು ಕರಾರನ್ನು ಕಡಿಮೆ ಬೆಲೆಗೆ ಅಂದರೆ 30 ಲಕ್ಷಕ್ಕೆ ಮಾಡಿರುತ್ತೇವೇ ಎಂದರೆ ನಮ್ಮಿಬ್ಬರ ನಡುವೆ ಅಷ್ಟೇ ಆಗಿತ್ತು ಎಂದು ನುಡಿಯುತ್ತಾರೆ. ಸದರಿ 30 ಲಕ್ಷದ ವ್ಯವಹಾರ ಕೇವಲ ಹಣದ ವ್ಯವಹಾರ ಆಗಿತ್ತೇ ಹೊರತು ಆಸ್ತಿಯ ಮಾರಾಟದ ವ್ಯವಹಾರ ಆಗಿರಲಿಲ್ಲ ಎಂದರೆ ಸುಳ್ಳು. ಸದರಿ ಕರಾರು ಪತ್ರ ಆದ ನಂತರ ನನ್ನ ಮತ್ತು ಪ್ರತಿವಾದಿಯ ನಡುವೆ ಹಣದ ವ್ಯವಹಾರ ನಡೆದಿರುತ್ತದೆ ಎಂದರೆ ಸುಳ್ಳು. ದಿನಾಂಕ 12.06.2017 ರಂದು ಸದರಿ ಕರಾರು ಪತ್ರ ಆಗಿರುತ್ತದೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 5 ನೇ ಪುಟದ 11 ನೇ ಪ್ಯಾರದಲ್ಲಿ ನಾನು ಪ್ರತಿವಾದಿಗೆ 5 ವರೆ ಲಕ್ಷ ರೂಪಾಯಿಯನ್ನು ಚೆಕ್ಕು ಮುಖಾಂತರ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಹೌದು. ಕ್ರಯದ ಕರಾರು ಆದ ನಂತರ ಮೊದಲು 17 ಲಕ್ಷ ರೂಪಾಯಿಗಳನ್ನು ನೀಡಿದ್ದೆ ನಂತರ 5 ವರೆ ಲಕ್ಷ ರೂಪಾಯಿಗಳನ್ನು ಚೆಕ್ ಮುಖಾಂತರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 5 ವರೆ ಲಕ್ಷ ರೂಪಾಯಿಯನ್ನು ನಾನು ಪ್ರತಿವಾದಿ ಅಂಜನಾಮೂರ್ತಿಯವರಿಗೆ ಕೊಟ್ಟಿಲ್ಲ ನಾನು ಬಾಲಾಜಿಯವರಿಗೆ ನೀಡಿರುತ್ತೇನೆ ಎಂದರೆ ಸುಳ್ಳು. ನನಗೆ ಬಾಲಾಜಿಯವರ ಪರಿಚಯವಿಲ್ಲ. ನಾನು ಪ್ರತಿವಾದಿಗೆ 5 ವರೆ ಲಕ್ಷ ರೂಪಾಯಿ ಹಣ ಕೊಟ್ಟ ಕರಾರಿನಲ್ಲಿ ಯಾವುದೇ ಷರಾ ವನ್ನು ನಮೂದಿಸಿಲ್ಲ ಮತ್ತು ಆ ಬಗ್ಗೆ ಯಾವುದೇ ಪ್ರತ್ಯೇಕ ಅಗ್ರಿಮೆಂಟ್ ಮಾಡಿಕೊಂಡಿಲ್ಲ. ಪ್ರತಿವಾದಿಗೆ ನಾನು ದಿಃ12.10.2017 ರಂದು ಯಾವುದೇ 5 ವರೆ ಲಕ್ಷ ರೂಪಾಯಿ ಹಣವನ್ನು ನೀಡದೆ ಇದ್ದುದ್ದರಿಂದ ನಿಪಿ-4 ರ ಕ್ರಯದ ಕರಾರಿನಲ್ಲಿ ಯಾವುದೇ ಷರಾವನ್ನು ನಮೂದಿಸಿಲ್ಲ ಮತ್ತು ಆ ಬಗ್ಗೆ ಪ್ರತ್ಯೇಕ

ಕರಾರು ಪತ್ರವನ್ನು ಮಾಡಿಕೊಂಡಿಲ್ಲ ಎಂದರೆ ಸುಳ್ಳು. ಪ್ರತಿವಾದಿಯವರು ನನಗೆ ತಮ್ಮ ವಕೀಲರ ಮುಖಾಂತರ ನೀಡಿದ ಮರುಉತ್ತರದ ನೋಟೀಸಲ್ಲಿರುವ ವಿಚಾರಗಳನ್ನೇ ತಮ್ಮ  ಲಿಖಿತ ಹೇಳಿಕೆಯಲ್ಲಿ ನಮೂದಿಸಿರುತ್ತಾರೆಂದರೆ ಸುಳ್ಳು. ನಿಪಿ-11ರ ಸದರಿ ಮರುಉತ್ತರ ನೋಟೀಸ್ ಪ್ರಕಾರ ನನಗೆ ಪ್ರತಿವಾದಿಯವರು  ಬಾಕಿ 2 ಲಕ್ಷ ರೂಪಾಯಿಗಳನ್ನು ಮಾತ್ರ ಕೊಡಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆಂದರೆ ಆ ರೀತಿ ನೋಟೀಸ್ ನಲ್ಲಿ ತಿಳಿಸಿರುತ್ತಾರೆಂದು ನುಡಿಯುತ್ತಾರೆ.

2. ಪ್ರತಿವಾದಿಯವರು ನಡೆಸುತ್ತಿರುವ ವಿನಾಯಕ ಜ್ಯೂಯಲೆರಿಯಲ್ಲಿ ಕೇವಲ ಆಭರಣಗಳನ್ನು ಮಾರಾಟ ಮಾಡುತ್ತಾರೆಯೇ ವಿನಹಃ ಅವರು ಆಭರಣಗಳನ್ನು ಅಡವಿಟ್ಟುಕೊಳ್ಳುವುದಿಲ್ಲ ಅವರು ಪಾನ್ ಬ್ರೋಕರ್ಸ್ ಅಲ್ಲ ಎಂದರೆ ಸರಿಯಲ್ಲ ಪ್ರತಿವಾದಿ ಪಾನ್ ಬ್ರೋಕರ್ಸ್ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಬಲ್ಲಿರಾ ಎಂದರೆ ಸಾಕ್ಷಿ ನನಗೂ ಅದಕ್ಕೂ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ನನಗೆ ಪಾವತಿಯಾದ  ಹಣಕ್ಕೆ ನಾನು 250 ಗ್ರಾಂ ಚಿನ್ನವನ್ನು ಅಡವಿಟ್ಟಿರುತ್ತೇನೆ ಆದರೆ ನನ್ನ ಅತ್ತೆಯ ಅಕೌಂಟ್ ಗೆ ಬಂದ ಹಣಕ್ಕೂ ನನ್ನ ಹಣಕ್ಕೂ ಸಂಬಂದವಿಲ್ಲ. ನನ್ನ ಅತ್ತೆ ಎಷ್ಟು ಗ್ರಾಂ ಚಿನ್ನವನ್ನು ಅಡವಿಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯ ಜ್ಯೂಯಲೆರಿಯಲ್ಲಿ ಯಾವುದೇ ಚಿನ್ನದ ಒಡವೆಗಳನ್ನು ಅಡವಿಟ್ಟಿಲ್ಲ ಮತ್ತು ನನಗೆ ಸಂಬಂದಪಟ್ಟ ಚಿನ್ನದ ಒಡವೆಗಳನ್ನು ಪ್ರತಿವಾದಿ ಅಡವಿಟ್ಟು ಕೊಂಡಿರಲಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 07.06.2019 ರಲ್ಲಿ ಪ್ರತಿವಾದಿ ಅಂಜನಮೂರ್ತಿ ಯವರ ವಿರುದ್ದ ಸಲ್ಲಿಸಿರುವ ದೂರುಗಳು ಈ ದಾವಾ ಬಾಕಿವಿರುವ ಸಂದರ್ಭದಲ್ಲಿ ಸಲ್ಲಿಸಿದ ದೂರುಗಳಾಗಿರುತ್ತದೆ. ರಾಧಾಕೃಷ್ಣ ರವರು ಪ್ರತಿವಾದಿ ಅಂಜನಾಮೂರ್ತಿಯವರ ವಿರುದ್ದ ಯಾವುದಾದರೂ ದಾವಾ ಸಲ್ಲಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಆದರೆ ಪ್ರತಿವಾದಿ ಈ ದಾವಾದಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ ನನಗೆ ರಾಧಾಕೃಷ್ಣರವರ ಬಗ್ಗೆ ಗೊತ್ತಾಯಿತು. ನಾನು ರಾಧಾಕೃಷ್ಣರವರ ಮೇಲೆ ಕ್ರಿಮಿನಲ್ ದೂರನ್ನು ಸಲ್ಲಿಸಿರುತ್ತೇನೆ. ಆ ಬಗ್ಗೆ ತನಿಖೆ ನಡೆದು ರಾಧಾಕೃಷ್ಣ, ಅಂಜನಾಮೂರ್ತಿ ಮತ್ತು ಇತರರ  ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ರಾಧಾಕೃಷ್ಣರವರು ಪ್ರತಿವಾದಿ ಅಂಜನಾಮೂರ್ತಿಯವರ ವಿರುದ್ದ ದಾವಾ

ಹೂಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಅಂದರೆ ನಿಪಿ-15 ರ ರಾಧಾಕೃಷ್ಣರವರ ಹೇಳಿಕೆಯ ಪ್ರಕಾರ ಸದರಿ ರಾಧಾಕೃಷ್ಣ ಮತ್ತು ಅಂಜನಾಮೂರ್ತಿಯವರ ನಡುವೆ ಕೇವಲ ಕೈಸಾಲದ ಬಗ್ಗೆ ವ್ಯವಹಾರವಾಗಿದ್ದು, ಸಾಲದ ಹಣದ ಭದ್ರತೆಗಾಗಿ ವ್ಯವಹಾರ ಆಗಿದ್ದು ಎಂದು ಹೇಳಿಕೆ ನೀಡಿರುತ್ತಾರೆಂದರೆ ನನಗೆ ಆ ವ್ಯವಹಾರದ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿರುವಂತಹ ದಾಖಲೆಗಳ ಬಗ್ಗೆ ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮತ್ತು ಪ್ರತಿವಾದಿ ಅಂಜನಾಮೂರ್ತಿಯವರ ನಡುವೆ ಆದಂತಹ ವ್ಯವಹಾರ ಕೇವಲ ಹಣದ ವ್ಯವಹಾರ ಯಾವುದೇ ರೀತಿಯ ಆಸ್ತಿ ಮಾರಾಟದ ಬಗ್ಗೆ ಆದಂತಹ ವ್ಯವಹಾರವಲ್ಲ ಎಂದರೆ ಸುಳ್ಳು. ಪ್ರತಿವಾದಿಯವರು ಆರ್ಥಿಕವಾಗಿ ಅನೂಕೂಲಸ್ಥರಾಗಿದ್ದು ಅವರಿಗೆ ನನ್ನ ಬಳಿ ಆಸ್ತಿಯ ವ್ಯವಹಾರ ಮಾಡುವಂತಹ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಮೊದಲು ಪ್ರತಿವಾದಿಯ ಬಳಿ ಕೆಲಸ ಮಾಡಿಕೊಂಡಿದ್ದೆ ಎಂದರೆ ಸುಳ್ಳು.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.